

# ಆಭರಣ ತಿಗಣೆಗಳ ಮಿಲನೋತ್ಸವ



■ ಚಿತ್ರ-ಲೇಖನ: **ಶಶಿಧರಸ್ವಾಮಿ ಆರ್. ಹಿರೇಮಠ**

**ಕು**ರುಚಲು ಕಾಡಿನಲ್ಲಿ ಕೀಟಗಳ ಅನ್ವೇಷಣೆಯಲ್ಲಿ ತೊಡಗಿದ್ದೆ. ಬ್ರಹ್ಮದಂಡೆಯ ಹೂವಿನ ಮೇಲೆ ಕುಳಿತ ಹೊಳೆವ ಹಸಿರು ಕೀಟ ಗಮನ ಸೆಳೆಯಿತು. ಹತ್ತಿರ ಹೋಗಿ ಅದರ ಫೋಟೋ ಕ್ಲಿಕ್ಕಿಸುತ್ತಿದ್ದ ಹಾಗೆಯೇ ಅದು ಅಲ್ಲಿಂದ ಹಾರಿತು. ಸ್ವಲ ಮುಂದೆ ಸಾಗಿದೆ. ಒಣಗಿದ ಕಡ್ಡಿಯ ಮೇಲೆ ಕುಳಿತ ಆ ಹೊಳೆವ ಎರಡು ಕೀಟಗಳನ್ನು ನೋಡಿ ವಿಸ್ಮಿತನಾದೆ. ಆ ಹೂವಿನ ಮೇಲೆ ಕುಳಿತ ಕೀಟ ಅದರಲ್ಲಿ ಒಂದಾಗಿತ್ತು.

ಅವುಗಳ ನಡುವಳಿಕೆಯು ಸಹಜವಾಗಿರದೇ ಅವು ಒಂದರ ಹಿಂದೊಂದು ಹಿಂಬಾಲಿಸುವುದು, ಮೌನದ ಮೂಕ ಪಿಸು ಮಾತು, ರೆಕ್ಕೆಗಳಿಂದ ಶಬ್ದ ಹೊರಡಿಸುವ ಜಾಣ್ಮೆಯ ನಡೆ ಎಲ್ಲವನ್ನು ಗಮನಿಸಿದಾಗ ಇವು ಮಿಲನಕ್ಕೆ ಅಣಿಯಾಗಿ ಸೂಚನೆ ನೀಡುವಂತಿತ್ತು. ನೋಡುತ್ತಿದ್ದ ಹಾಗೆಯೇ ಅವು ತಮ್ಮ ದೇಹ ಹಿಂತುದಿಯನ್ನು ಒಂದಕ್ಕೊಂದು ಕೂಡಿಸಿ ಕೂಟಗೊಂಡು ಮಿಲನದಲ್ಲಿ ಬಂಧಿಯಾದವು. ಗಾತ್ರದಲ್ಲಿ ದೊಡ್ಡದಾದ ಹೆಣ್ಣು ಕೀಟವು ತಾನು ನಡೆದು ಮುಂದೆ ಸಾಗಿದರೆ ಗಂಡು ಹಿಮ್ಮುಖವಾಗಿ ನಡೆದು ಹೋಗುತ್ತಿತ್ತು.

ಹಿಂದೆ ಅಲ್ಲಿ ಹೂವಿನ ಮೇಲೆ ಕುಳಿತ ಈ ಕೀಟವು ಇಲ್ಲಿಗೆ ಹಾರಿ ಬರಲು ಕಾರಣ ಇಲ್ಲಿರುವ ಹೆಣ್ಣು ಫೆರೋಮೋನ್ ಸ್ರವಿಸಿ ಗಾಳಿಯಲ್ಲಿ ತೇಲಿ ಬಿಟ್ಟು ಪ್ರಿಯಕರನನ್ನು ಆಕರ್ಷಿಸಿದೆ. ಗಂಡು ಕೀಟವು ಅದನ್ನು ಗ್ರಹಿಸಿ ತನ್ನ ಮಿಲನದ ಒಪ್ಪಿಗೆಯ ಸಂದೇಶವನ್ನು ಫೆರೋಮೋನ್ ಮೂಲಕ ರವಾನಿಸಿ ಇಲ್ಲಿಗೆ ಹಾರಿ ಬಂದು ಗಂಡು -ಹೆಣ್ಣು ಕೂಟಕೊಂಡಿವೆ.

ಇವು ಹೊಳೆವ ಹಸಿರು ಬಣ್ಣವನ್ನು ಹೊಂದಿವೆ. ದೇಹ ಮೇಲ್ಭಾಗವು ಗುರಾಣಿಯಂತಿರುವ ರೆಕ್ಕೆಗಳಿಂದ ಮುಚ್ಚಿಕೊಂಡಿದೆ. ಅಲ್ಲಲ್ಲಿ ಕಪ್ಪಾದ ಚುಕ್ಕೆಗಳಿವೆ. ಇವುಗಳನ್ನು ಕೆಲ ಸಲ ಜೀರುಂಡೆ (ಬೊರಂಗಿ) ಎಂದು ತಪ್ಪಾಗಿ ಭಾವಿಸುತ್ತಾರೆ. ಇವು ಅರಣ್ಯದ ಮರ -ಗಿಡಗಳಿಗೆ ಹಾಗೂ ವಾಣಿಜ್ಯ ಬೆಳೆಗಳಿಗೆ ಹಾನಿ ಮಾಡುತ್ತವೆ. ಶತ್ರುವಿನಿಂದ ಇವಕ್ಕೆ ತೊಂದರೆ ಉಂಟಾದಾಗ, ತಮ್ಮ ದೇಹದ ಬದಿಯಲ್ಲಿರುವ ಗ್ರಂಥಿಗಳಿಂದ ಆಲ್ಕೋಹಾಲ್ (ಮಧ್ಯಸಾರ) ಅಲ್ಡಿಹೈಡ್, ಈಸ್ಟರ್ ನಂತಹ ರಸಾಯನಿಕವನ್ನು ಹೊರಸೂಸಿ ಪಾರಾಗುತ್ತವೆ. ಕೆಲವು ಸಲ ಸತ್ತು ಬಿದ್ದಂತೆ ನಟಿಸಿ ಬಚಾವಾಗುವುದರಲ್ಲೂ ಇದು ನಿಪುಣ.

ನಮ್ಮೂರಲ್ಲಿ ಇವನ್ನು ನಾಯಿ ಜಿರಂಗಿ (ನಾಯಿ ಬೊರಂಗಿ) ಎಂದು ಕರೆಯುತ್ತಾರೆ, ಹೊಳೆಯುವ ಗುರಾಣಿ ತಿಗಣೆ ಅಥವಾ ಆಭರಣ ತಿಗಣೆಗಳೆಂದು ಕರೆದು, ಆಂಗ್ಲಭಾಷೆಯಲ್ಲಿ ಮೆಟಾಲಿಕ್ ಶೀಲ್ಡ್ ಬಗ್ ಅಥವಾ ಜ್ಯುವೆಲ್ ಬಗ್ ಎಂದಿದ್ದಾರೆ. ಕೀಟ ವರ್ಗದ ಹೆಟೆರೊಪ್ಟೆರಾ ಗುಂಪಿನ ಸ್ಕ್ಯುಟೆಲ್ಲೆರಿಡೇ ಕುಟುಂಬಕ್ಕೆ ಸೇರಿದೆ. (ವೈಜ್ಞಾನಿಕ ಹೆಸರು ಕ್ರೈಸೋಕೊರಿಸ್) ಪ್ರಪಂಚದಾದ್ಯಂತ 450 ಜಾತಿಯ ಗುರಾಣಿ ತಿಗಣೆಗಳಿವೆ.